**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ.1508/2023.**

ಪಿರ್ಯಾದುದಾರರುಃ– ಮಂಕಿ ಪೊಲೀಸ್ ಠಾಣೆ ,
ಮಂಕಿ.
ತಾಲೂಕುಃ– ಹೊನ್ನಾವರ.

**– ವಿರುದ್ಧ –**

ಆರೋಪಿತಃ– ಶುಕ್ರ ತಂದೆ ರಾಮಾ ಮರಾಠಿ,
ವಯಸ್ಸು ಸುಮಾರುಃ– 32 ವರ್ಷ,
ವೃತ್ತಿಃ– ರೈತಾಬಿ,
ಸಾಕೀನಃ– ಹಡಿಕಲ್,
ಪೋಸ್ಟ್ ಆಡುಕುಳ ,
ತಾಲೂಕುಃ– ಹೊನ್ನಾವರ.

*****

**ದೋಷರೋಪಣೆ.**

ಶ್ರೀ ಈರಣ್ಣ ಹುಣಶಿಕಟ್ಟಿ, ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ದಿನಾಂಕ 03/11/2023 ರಂದು ಸಂಜೆ 7.00 ಗಂಟೆಯ ಸುಮಾರಿಗೆ ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯ ಆಡುಕುಳ ಪೋಸ್ಟ್ , ಹಡಿಕಲ್ ಗ್ರಾಮದಲ್ಲಿ ಪಿರ್ಯಾದಿಯು ಅವರ ಮನೆಯ ಮೇಲ್ಬದಿಗೆ ಇರುವ 4 ಗುಂಟೆ ಅರಣ್ಯ ಅತಿಕ್ರಮಣ ಜಾಗದಲ್ಲಿ ನೆಟ್ಟಿರುವ ಅಡಿಕೆ ಗಿಡಗಳಿಗೆ ನೀರು ಸರಬರಾಜು ಮಾಡಲು ಅಂತಾ ಅವರ ಮನೆಯ ಬಾವಿಯಿಂದ ಪೈಪ್ ಹಾಕಲು ಕೆಲಸಗಾರರಾದ ಚಾಸಾ 5 ರಿಂದ 8 ರವರನ್ನು ಕರೆಯಿಸಿ, ಕೆಲಸ ಮಾಡಿಸುತ್ತಿರುವಾಗ ಆರೋಪಿಯಾದ ನೀನು, ಕೈಯಲ್ಲಿ ಕತ್ತಿ

ಹಿಡಿದುಕೊಂಡು ಹೋಗಿ ರಸ್ತೆ ಪಕ್ಕದಲ್ಲಿ ನಿಂತಿರುವ ಪಿರ್ಯಾದಿಯವರಿಗೆ ಉದ್ದೇಶಿಸಿ, ತನ್ನ ಜಾಗದಲ್ಲಿ ಪೈಪು ಹಾಕಬೇಡ ಅಂತಾ ಹೇಳಿದರೂ, ನೀನು ಮತ್ತೆ ಪೈಪು ಹಾಕುತ್ತಿದ್ದೀಯಾ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಈ ಮೂಲಕ ಆರೋಪಿಯಾದ ನೀನು **ಭಾರತೀಯ ದಂಡ ಸಂಹಿತೆ ಕಲಂ.** 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಪಿರ್ಯಾದಿಯು, ಆರೋಪಿಯಾದ ನಿನಗೆ ಇದು ನಿನ್ನ ಜಾಗೆಯಲ್ಲ ತಾನು ರಸ್ತೆ ಪಕ್ಕದಿಂದ ಪೈಪು ಹಾಕುತ್ತಿದ್ದೇನೆ ಅಂತಾ ಹೇಳಿದ್ದಕ್ಕೆ ಆರೋಪಿಯಾದ ನೀನು, ಪಿರ್ಯಾದಿಗೆ, ನಿನಗೆ ಒಮ್ಮೆ ಹೇಳಿದರೆ ಗೊತ್ತಾಗುವುದಿಲ್ಲ ಎಂದು ಹೇಳಿದವನೆ, ನಿನ್ನ ಕೈಯಲ್ಲಿದ್ದ ಕತ್ತಿಯಿಂದ ಪಿರ್ಯಾದಿಯ ತಲೆ, ಮೂಗೂ ಮತ್ತು ಬಲಗೈಗೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ಮೂಲಕ ಆರೋಪಿಯಾದ ನೀನು **ಭಾರತೀಯ ದಂಡ ಸಂಹಿತೆ ಕಲಂ. 324** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯಾದ ನೀನು, ಪಿರ್ಯಾದಿಗೆ ಮತ್ತೆ ಹೊಡೆಯಲು ಹೋದಾಗ ಪಿರ್ಯಾದಿಯ ಹೆಂಡತಿಯಾದ ಚಾಸಾ 4 ರವರು ಒಮ್ಮೆಲೆ ಚೀರಿಕೊಂಡಾಗ, ಕೆಲಸ ಮಾಡುತ್ತಿದ್ದ ಚಾಸಾ 5 ರಿಂದ 8 ರವರು ಪಿರ್ಯಾದಿಗೆ ಹೊಡೆಯುವುದನ್ನು ತಪ್ಪಿಸಿದ್ದಕ್ಕೆ, ನೀನು ಪಿರ್ಯಾದಿಯವರಿಗೆ ಉದ್ದೇಶಿಸಿ, ಇನ್ನೊಮ್ಮೆ ಈ ಜಾಗೆಯಲ್ಲಿ ಪೈಪು ಹಾಕಲು ಬಂದರೆ ನಿನ್ನನ್ನು ಜೀವ ಸಹಿತ ಮುಗಿಸಿಯೇ ಬಿಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿಯಾದ ನೀನು **ಭಾರತೀಯ ದಂಡ ಸಂಹಿತೆ ಕಲಂ.** 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

ಆರೋಪಿಯ ಉತ್ತರ : ತಿಳಿಯಿತು.

ಪ್ರಶ್ನೆ2 : ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ.

**ದಿನಾಂಕಃ– 29–05–2024.**

**(ಈರಣ್ಣ ಹುಣಶಿಕಟ್ಟಿ).,**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

ಆರೋಪಿಯ ಸಹಿಃ–
ಸಹಿ ಇದೆ.

*****